ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2026/976 ದಿನಾಂಕ : 4.09.26

## ಸುತ್ತೋಲೆ

**ವಿಷಯ:-** New Software ನಲ್ಲಿ ಕಾಲೇಜಿನ UGC/Non-UGC ಶಿಕ್ಷಕರುಗಳ ಮಾಹಿತಿಯನ್ನು ನಮೂದಿಸುವ ಕುರಿತು.

**ಉಲ್ಲೇಖ:-** 1.ಮಾನ್ಯ ಕುಲಪತಿಗಳ ಆದೇಶ ದಿನಾಂಕ:29.07.2026.
2.ನಂ.ಕವಿವಿ/ಪರೀಕ್ಷಾ-ಗೌಪ್ಯ/2026/920 ದಿನಾಂಕ:31.07.2026.
3.ನಂ.ಕವಿವಿ/ಪರೀಕ್ಷಾ-ಗೌಪ್ಯ/2026/956 ದಿನಾಂಕ:20.08.2026.
4. ನಂ.ಕವಿವಿ/ಪರೀಕ್ಷಾ-ಗೌಪ್ಯ/2026/961 ದಿನಾಂಕ:27.08.2026.

****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈಗಾಗಲೇ ಉಲ್ಲೇಖಿತ 2, 3 & 4ರ ಪ್ರಕಾರ ಸುತ್ತೋಲೆಗಳನ್ನು ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ UGC/Non-UGC ಶಿಕ್ಷಕರುಗಳ ವಿವರಗಳನ್ನು New Software ನಲ್ಲಿ ನಮೂದಿಸಲು ತಿಳಿಸಲಾಗಿತ್ತು. ಆದರೆ ಎಲ್ಲಾ ಕಾಲೇಜುಗಳ ಪ್ರಾಚಾರ್ಯರುಗಳು ತಮ್ಮ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ UGC/Non-UGC ಶಿಕ್ಷಕರುಗಳ ಸಂಪೂರ್ಣ ಮಾಹಿತಿಯನ್ನು New Software ನಲ್ಲಿ ಕಡ್ಡಾಯವಾಗಿ ನಮೂದಿಸಬೇಕಾಗಿರುತ್ತದೆ.

ಆದರೆ, ಕೆಲವು ಸರಕಾರಿ ಪ್ರಥಮ ದರ್ಜೆ ಮತ್ತು ಅನುದಾನಿತ / ಅನುದಾನ ರಹಿತ ಎಲ್ಲ ಕಾಲೇಜಿನವರ ಸಹಿ UGC/Non-UGC ಶಿಕ್ಷಕರುಗಳ ಮಾಹಿತಿಯನ್ನು New Software ನಲ್ಲಿ ನಮೂದಿಸದೇ ಇರುವುದು ಕಂಡು ಬಂದಿದ್ದು, ಸದರಿ ಬಿಟ್ಟು ಹೋದ ಶಿಕ್ಷಕರುಗಳ ಮಾಹಿತಿಯನ್ನು ನಮೂದಿಸದಿರುವುದಕ್ಕೆ ಸೂಕ್ತ ಕಾರಣವನ್ನು ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಸಂಬಂಧಿಸಿದ ಕಾಲೇಜುಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

ಮುಂದುವರೆದು, ಸದರಿ ವಿಷಯವಾಗಿ ನಮೂದಿಸದೇ ಇರುವ UGC/Non-UGC ಶಿಕ್ಷಕರುಗಳ ಮಾಹಿತಿಯನ್ನು ದಿನಾಂಕ:07.09.2026ರ ಒಳಗಾಗಿ ನಮೂದಿಸಲು ಸೂಚಿಸಲಾಗಿದೆ. ಒಂದು ವೇಳೆ ಪ್ರಾಚಾರ್ಯರು ಸಂಪೂರ್ಣವಾದ ಮಾಹಿತಿ ಪೂರೈಸದೇ ಇದ್ದರೆ ವಿಶ್ವವಿದ್ಯಾಲಯದ ನಿಯಮಾನುಸಾರ ಕ್ರಮ ಜರುಗಿಸುವುದು.

04/09/2026
ಕುಲಸಚಿವರು(ಮೌಲ್ಯಮಾಪನ)

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ / ಸಂಯೋಜಕರುಗಳಿಗೆ.

**ಪ್ರತಿ ಮಾಹಿತಿಗಾಗಿ:**

1. ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
2. ಕುಲಪತಿಗಳ/ಕುಲಸಚಿವರ/ ಕುಲಸಚಿವರು(ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಕ.ವಿ.ವಿ. ಧಾರವಾಡ.
5. ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.